**ಬಸವರಾಜ ಹೊರಟ್ಟಿ**
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

ಕಛೇರಿ ದೂರವಾಣಿ: 2225 8575
2203 3325
ಫ್ಯಾಕ್ಸ್ : 2225 2068
ನಿವಾಸ : 2234 0767
ಕೊಠಡಿ ಸಂಖ್ಯೆ: 117, ಒಂದನೇ ಮಹಡಿ
ವಿಧಾನ ಸೌಧ, ಬೆಂಗಳೂರು – 560 001
ಇ–ಮೇಲ್ : chairmanklc.uh@gmail.com

**ದಿನಾಂಕ: 16-06-2021.**

**ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರೇ,**

ವಿಷಯ: ಬೆಂಗಳೂರು ನಗರ ಕುಮಾರಕೃಪ ದಕ್ಷಿಣ, ಲೋಕೋಪಯೋಗಿ ವಸತಿ ಗೃಹ ಸಂಖ್ಯೆ: 03ನ್ನು ಹಂಚಿಕೆ ಮಾಡುವ ಕುರಿತು.

ಉಲ್ಲೇಖ: 1) ನಾನು ತಮಗೆ ಕಳುಹಿಸಿದ ಪತ್ರಗಳು ದಿನಾಂಕ: 10-02-2021, 22-02-2021, 03-03-2021, 18-03-2021 ಹಾಗೂ 12-04-2021.
2) ವಿಧಾನ ಮಂಡಲದ ಉಭಯ ಸದನಗಳ ಪೀಠಾಸೀನಾಧಿಕಾರಿಗಳು ಜಂಟೀಯಾಗಿ ಬರೆದ ಪತ್ರ ದಿನಾಂಕ: 19-04-2021.

ತಮ್ಮೆಲ್ಲರ ಸಹಾಯ, ಸಹಕಾರ, ಸಹಯೋಗದೊಂದಿಗೆ ಫೆಬ್ರುವರಿ 9 ರಿಂದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನಮ್ಮೆಲ್ಲರಿಗೂ ತಿಳಿದಿರುವಂತೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಭಾಪತಿ ಹುದ್ದೆ ಅತ್ಯಂತ ಘನತೆ ಹಾಗೂ ಗೌರವಾನ್ವಿತ ಸಾಂವಿಧಾನಿಕ ಹುದ್ದೆಯಾಗಿದೆ. ಮೇಲ್ಕಾಣಿಸಿದ ಉಲ್ಲೇಖದ ಪತ್ರಗಳನ್ವಯ ವಿಧಾನ ಪರಿಷತ್ತಿನ ಸಭಾಪತಿಗಳಿಗೆ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿರುವ ಕುಮಾರ ಕೃಪ ದಕ್ಷಿಣ, ವಸತಿ ಗೃಹ ಸಂಖ್ಯೆ: 03 ಇದು ಸಭಾಪತಿಗಳ ಅಧಿಕೃತ ನಿವಾಸವಾಗಿರುತ್ತದೆ. (Designated Residence). ಕಳೆದ 12 ವರ್ಷಗಳಿಂದ ಹಿಂದಿನ ಸಭಾಪತಿಗಳಾದ ಮಾನ್ಯ ಶ್ರೀ ವೀರಣ್ಣ ಮತ್ತಿಕಟ್ಟಿ, ಮಾನ್ಯ ಶ್ರೀ ಡಿ.ಎಚ್.ಶಂಕರಮೂರ್ತಿ ಹಾಗೂ ಮಾನ್ಯ ಶ್ರೀ ಪ್ರತಾಪಚಂದ್ರ ಶೆಟ್ಟಿ ಇವರುಗಳು ಸಭಾಪತಿಗಳಾಗಿದ್ದ ಅವಧಿಯಲ್ಲಿ ಸದರಿ ನಿವಾಸದಲ್ಲಿಯೇ ವಾಸ್ತವ್ಯ ಹೂಡಿದ್ದರು. ಅದೇ ರೀತಿ ನಾನು ಸಭಾಪತಿ ಹುದ್ದೆ ಅಲಂಕರಿಸಿದ ಬಳಿಕ ತಮಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆದು ಸದರಿ ವಸತಿ ಗೃಹ ಸಂಖ್ಯೆ:03ನ್ನು ನನ್ನ ವಾಸ್ತವ್ಯಕ್ಕೆ ಹಂಚಿಕೆ ಮಾಡಬೇಕೆಂದು ಕೋರಿ ಪತ್ರ ಬರೆದಿದ್ದೆ. ಅಲ್ಲದೇ ವಸತಿ ಗೃಹದ ಹಂಚಿಕೆ ಆಗದ ಕಾರಣ ನಂತರದ ದಿನಗಳಲ್ಲಿ ಇದೇ ವಿಷಯಕ್ಕೆ ಸಂಬಂಧಿಸಿದಂತೆ ನಾಲ್ಕು ಪತ್ರಗಳನ್ನು ಬರೆದು ವಸತಿ ಗೃಹವನ್ನು ಕೂಡಲೇ ಹಂಚಿಕೆ ಮಾಡಬೇಕೆಂದು ಕೋರಿಕೊಂಡಿದ್ದೆ. ಅಲ್ಲದೇ ವಿಧಾನ ಸಭೆಯ ಸಭಾಧ್ಯಕ್ಷರು ಹಾಗೂ ನಾನು ಇಬ್ಬರೂ ಸೇರಿ ಜಂಟಿಯಾಗಿ ತಮಗೆ ದಿನಾಂಕ 19-4-2021 ರಂದು ಪತ್ರ ಬರೆದು ಸಭಾಧ್ಯಕ್ಷರು ಹಾಗೂ ಸಭಾಪತಿಗಳಿಗೆ ಅಧಿಕೃತ ನಿವಾಸವನ್ನೇ ಹಂಚಿಕೆ ಮಾಡಬೇಕೆಂದು ಸಹ ಕೋರಿದ್ದು ತಮ್ಮ ಗಮನಕ್ಕೆ ಬಂದಿದೆ ಎಂದು ನಾನು ನಂಬಿದ್ದೇನೆ.

ಅಲ್ಲದೇ ನನ್ನ ಹುದ್ದೆಯ ಶಿಷ್ಟಾಚಾರವನ್ನು ಬದಿಗೊತ್ತಿ ತಮ್ಮನ್ನು ವೈಯಕ್ತಿಕವಾಗಿ ಭೇಟಿಯಾಗಿ ಈ ಕುರಿತು ಮನವರಿಕೆ ಮಾಡಿದ್ದು ಸಹ ತಮ್ಮ ಗಮನದಲ್ಲಿದೆ ಎಂದು ಭಾವಿಸುತ್ತೇನೆ. ಆ ಸಂದರ್ಭದಲ್ಲಿ ತಾವು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರಿಗೆ ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೀರಿ ಹಾಗೂ ತಮ್ಮ ಪ್ರಧಾನ ಕಾರ್ಯದರ್ಶಿಯವರಿಗೂ ಈ ಕುರಿತು ಕೂಡಲೇ ಕ್ರಮ ಜರುಗಿಸಿ ಸದರಿ ವಸತಿ ಗೃಹ ಹಂಚಿಕೆ ಮಾಡುವಂತೆ ಆದೇಶಿಸಿದ್ದೀರಿ. ಆದರೆ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರು ಈ ಕುರಿತು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು ಹಾಗೂ ತಮ್ಮ ಹಿರಿಯ ಅಧಿಕಾರಿಗಳೂ ಸಹ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ನನ್ನ ಮನಸ್ಸಿಗೆ ತುಂಬಾ ನೋವುಂಟು ಮಾಡಿದೆ.

ಶಿಷ್ಟಾಚಾರದ ಸಂಪ್ರದಾಯದಂತೆ ರಾಜ್ಯದಲ್ಲಿ ರಾಜ್ಯಪಾಲರ ನಂತರ ವಿಧಾನ ಪರಿಷತ್ತಿನ ಸಭಾಪತಿ ಸ್ಥಾನ ಎರಡನೇ ಅತೀ ದೊಡ್ಡ ಹುದ್ದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೂ ಕೂಡ ನೀವು ನನ್ನ ವಾಸ್ತವ್ಯಕ್ಕೆ ಗೃಹ ಹಂಚಿಕೆ ಕುರಿತು ಫೆಬ್ರುವರಿಯಿಂದ ಇಲ್ಲಿಯವರೆಗೆ ಹಲವು ಬಾರಿ ಮೌಖಿಕವಾಗಿ ಹಾಗೂ ಪತ್ರಗಳ ಮುಖೇನ ತಮ್ಮನ್ನು ಹಾಗೂ ಸಂಬಂಧಿಸಿದ ಹಿರಿಯ ಸಚಿವರನ್ನು ಹಾಗೂ ಅಧಿಕಾರಿಗಳನ್ನು ಕೋರಿದರೂ ಕೂಡಾ ಇದುವರೆಗೂ ಯಾವದೇ ಕ್ರಮ ಕೈಗೊಳ್ಳದೇ ಇರುವದು ದುರದೃಷ್ಟಕರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡಿದ ಅಪಮಾನ ಎಂಬುದು ನನ್ನ ಮನದಾಳದ ಭಾವನೆಯಾಗಿದೆ.

ಕಳೆದ 12 ವರ್ಷಗಳಿಂದ ಸದರಿ ನಿವಾಸ ಸಂಖ್ಯೆ: 03ನ್ನು ಸಭಾಪತಿಗಳಿಗೇ ಮೀಸಲಿಟ್ಟು ಅದೇ ವಸತಿ ಗೃಹವನ್ನೇ ಸಭಾಪತಿಗಳಿಗೆ ನೀಡುತ್ತ ಬಂದಿದ್ದು, ಅದೇ ವಸತಿ ಗೃಹವನ್ನು ನನಗೆ ಹಂಚಿಕೆ ಮಾಡುವಂತೆ ಹಲವು ಬಾರಿ ಕೋರಿದ್ದಾಗಿಯೂ ಇತ್ತೀಚೆಗೆ ಸದರಿ ವಸತಿ ಗೃಹವನ್ನು ತಮ್ಮ ಮಂತ್ರಿಮಂಡಲದ ಸದಸ್ಯರೊಬ್ಬರಿಗೆ ನೀಡಿರುವ ವಿಷಯ ನನಗೆ ತಿಳಿದು ಬಂದಿದ್ದು ಇದರಿಂದ ನನಗೆ ಅತೀವ ಖೇದವುಂಟಾಗಿದೆ. ಇದರಿಂದ ಸಭಾಪತಿ ಹುದ್ದೆಯ ಗೌರವಕ್ಕೆ ಧಕ್ಕೆಯುಂಟಾಗಿದ್ದು ನಿಮ್ಮ ಮತ್ತು ನಿಮ್ಮ ಅಧಿಕಾರಿಗಳ ನಡೆ ನನ್ನ ಮನಸ್ಸನ್ನು ಬಹಳಷ್ಟು ಘಾಸಿಗೊಳಿಸಿದೆ. ಅಲ್ಲದೇ ಸಂವಿಧಾನಾತ್ಮಕ ಹುದ್ದೆಯಾಗಿರುವ ಸಭಾಪತಿ ಹುದ್ದೆಯ ಔಚಿತ್ಯವನ್ನೇ ಪ್ರಶ್ನಿಸುವಂತಾಗಿದೆ ಎನ್ನುವ ಭಾವನೆ ಸಾರ್ವಜನಿಕರಲ್ಲಿ ಮೂಡುತ್ತಿದೆ. ಆದ ಕಾರಣ ಬಹಳ ವ್ಯಥೆ ಹಾಗೂ ನೋವಿನಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ.

ಆದ್ದರಿಂದ ಮೇಲೆ ತಿಳಿಸಿರುವ ಅಧಿಕೃತ ಸರಕಾರಿ ವಸತಿ ಗೃಹವನ್ನು ಕೂಡಲೇ ತೆರುವುಗೊಳಿಸಿ ನನಗೆ ಹಂಚಿಕೆ ಮಾಡಿ ನನ್ನ ವಾಸ್ತವ್ಯಕ್ಕೆ ಹಾಗೂ ಗೃಹ ಕಚೇರಿ ಕೆಲಸಗಳಿಗೆ ಅನುವು ಮಾಡಿಕೊಡುವಂತೆ ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ಸೂಕ್ತ ಸಂದರ್ಭದಲ್ಲಿ ಸೂಕ್ತ ವೇದಿಕೆಯಲ್ಲಿ ಈ ವಿಷಯದ ಕುರಿತು ಪ್ರಸ್ತಾಪಿಸುವ ಅನಿವಾರ್ಯತೆ ಬಂದೊದಗುವ ಮೊದಲು ಸದರಿ ವಸತಿ ಗೃಹ ಸಂಖ್ಯೆ: 03ನ್ನು ಕೂಡಲೇ ಹಂಚಿಕೆ ಮಾಡುವಂತೆ ತಮ್ಮಲ್ಲಿ ವಿನಂತಿಸುತ್ತೇನೆ.

ಕಳೆದ ಎರಡು ತಿಂಗಳುಗಳಿಂದ ರಾಜ್ಯದಲ್ಲಿ ಕೊರೋನಾ ಮಹಾಮಾರಿಯ ಅಟ್ಟಹಾಸದಿಂದ ಲಾಕ್‌ಡೌನ್ ಇದ್ದ ಕಾರಣ ವಸತಿ ಗೃಹ ಹಂಚಿಕೆ ಕುರಿತಂತೆ ತಮ್ಮೊಂದಿಗೆ ಪ್ರಸ್ತಾಪಿಸಿಲ್ಲ. ಈಗ ಕೊರೋನಾ ಹಾವಳಿಯು ನಿಯಂತ್ರಣಕ್ಕೆ ಬರುತ್ತಿದ್ದು ಜನಜೀವನ ಮೊದಲಿನ ಸಹಜ ಸ್ಥಿತಿಗೆ ಮರಳುವ ವಾತಾವರಣ ನಿರ್ಮಾಣವಾಗುವ ಲಕ್ಷಣಗಳು ಕಂಡು ಬರುತ್ತಿವೆ. ಕಾರಣ ಈಗಲಾದರೂ ತಾವು ಕಾರ್ಯ ಪ್ರವೃತ್ತರಾಗಿ ಸಭಾಪತಿಗಳ ಅಧಿಕೃತ ನಿವಾಸವಾಗಿರುವ ವಸತಿ ಗೃಹ ಸಂಖ್ಯೆ: 03ನ್ನು ಕೂಡಲೇ ಹಂಚಿಕೆ ಮಾಡುವಂತೆ ತಮ್ಮನ್ನು ಮತ್ತೊಮ್ಮೆ ಕೋರುತ್ತೇನೆ.

ಇಂತೀ ತಮ್ಮ,

(ಬಸವರಾಜ ಹೊರಟ್ಟಿ)

<u>ವಂದನೆಗಳೊಂದಿಗೆ,</u>

**ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ ನವರು,**
ಮಾನ್ಯ ಮುಖ್ಯ ಮಂತ್ರಿಯವರು, ಕರ್ನಾಟಕ ಸರಕಾರ, ಬೆಂಗಳೂರು.